# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ವಾಣಿಜ್ಯ ಬ್ಯಾಂಕ್ ಹಾಗೂ ವಲಯ ಗ್ರಾಮೀಣ ಬ್ಯಾಂಕುಗಳು ಮೀನುಗಾರರಿಗೆ 3% ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆಗೆ ಸಹಾಯಧನ ನೀಡುವ ಯೋಜನೆಯನ್ನು 2010-11ನೇ ಸಾಲಿನಲ್ಲಿ ಮುಂದುವರಸುವಿಕೆ.

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/148/ಮೀಇಯೋ/2009 ದಿನಾಂಕ:01-02-2010.

(2) ಪತ್ರ ಸಂಖ್ಯೆ:ಪಂವಾಯೋ/2/2010-11 ದಿನಾಂಕ:03-04-2010.

ಶ್ರೀ ರಾಜ್ಯ ಸರ್ಕಾರದ ಮೀನುಗಾರಿಕೆ ನಿರ್ದೇಶಕರ ಕಛೇರಿ
10 MAY 2010
ಬೆಂಗಳೂರು

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ವಾಣಿಜ್ಯ ಹಾಗೂ ವಲಯ ಗ್ರಾಮೀಣ ಬ್ಯಾಂಕುಗಳು ಮೀನುಗಾರರಿಗೆ ಪ್ರತಿಶತ 3ರ ಬಡ್ಡಿದರದಲ್ಲಿ ಸಾಲ ನೀಡಿದಲ್ಲಿ ವಿಧಿಸುವ ಹೆಚ್ಚುವರಿ ಬಡ್ಡಿಗೆ ಸಹಾಯಧನವನ್ನು ಮೀನುಗಾರಿಕೆ ಇಲಾಖೆಯಿಂದ ಭರಿಸುವ ಬಗ್ಗೆ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ ಸದರಿ ಆದೇಶವು ದಿನಾಂಕ:01-11-2009 ರಿಂದ 31-03-2010ರವರೆಗೆ ಪಡೆದ ಮತ್ತು ಹಿಂತಿರುಗಿಸಿದ ಸಾಲಗಳಿಗೆ ಮಾತ್ರ ಅನ್ವಯಿಸುವುದರಿಂದ ಹೆಚ್ಚಿನ ಮೀನುಗಾರರಿಗೆ ಯಾವುದೇ ಪ್ರಯೋಜನ ಆಗಿರುವುದಿಲ್ಲ. ಆದ್ದರಿಂದ, ಸದರಿ ಯೋಜನೆಯ ಪ್ರಯೋಜನವನ್ನು ಮೀನುಗಾರರು ಪಡೆಯಬೇಕಾದಲ್ಲಿ 2010-11ನೇ ಸಾಲಿನಲ್ಲೂ ಸಹ ಈ ಯೋಜನೆಯನ್ನು ಮುಂದುವರೆಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ ಸಂಖ್ಯೆ:ಪಸಂಮೀ 148 ಮೀಇಯೋ 2009, ಬೆಂಗಳೂರು ದಿನಾಂಕ:07-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ವಾಣಿಜ್ಯ ಬ್ಯಾಂಕ್ ಹಾಗೂ ವಲಯ ಗ್ರಾಮೀಣ ಬ್ಯಾಂಕುಗಳು ಮೀನುಗಾರರಿಗೆ ಪ್ರತಿಶತ 3ರ ಬಡ್ಡಿದರದಲ್ಲಿ ಸಾಲ ನೀಡಿದಲ್ಲಿ ವಿಧಿಸುವ ಹೆಚ್ಚುವರಿ ಬಡ್ಡಿಗೆ ಸಹಾಯಧನವನ್ನು ಮೀನುಗಾರಿಕೆ ಇಲಾಖೆಯಿಂದ ಭರಿಸುವ ಯೋಜನೆಯನ್ನು 2010-11ನೇ ಸಾಲಿನಲ್ಲಿ ಮುಂದುವರೆಸಲು ಅನುಮತಿಸಿದೆ.

ಸದರಿ ಯೋಜನೆಗೆ ತಗಲುವ ವೆಚ್ಚವನ್ನು 2010-11ನೇ ಸಾಲಿನ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ-00-800-ಇತರೆ ವೆಚ್ಚಗಳು-0-28-ವಾಣಿಜ್ಯ ಬ್ಯಾಂಕ್‌ಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು (ಯೋಜನೆ)" ಅಡಿ ಒದಗಿಸಿರುವ ರೂ.60.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಸದರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆದೇಶ ಸಂಖ್ಯೆ:ಪಸಂಮೀ/148/ ಮೀಇಯೋ/2009 ದಿನಾಂಕ:01-02-2010ರ ಅನುಬಂಧದಲ್ಲಿ ವಿಧಿಸಿರುವ ಮಾರ್ಗಸೂಚಿಯನ್ನು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ/424/ವೆಚ್ಚ-4/2009 ದಿನಾಂಕ:23-04-2010 ಮತ್ತು ಯೋಜನಾ ಇಲಾಖೆ ಟಿಪ್ಪಣಿ ಸಂಖ್ಯೆ:ಪಿಡಿ/20/ಪಿಎಫ್ಒ/2010 ದಿನಾಂಕ:30-04-2010 ಗಳಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನಸೌಧ, ಬೆಂಗಳೂರು.
6) ಸಂಯೋಜಕರು, SLBC ಮತ್ತು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.